ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# ಯೇಸು ಮಾಡಿದ ಅದ್ಭುತ ಕಾರ್ಯಗಳು



ಬರಹಗಾರರು: Edward Hughes

ಚಿತ್ರಲೇಖಕರು: Byron Unger; Lazarus

ಅಳವಡಿಸುವವರು: E. Frischbutter; Sarah S.

ಪದ್ಮಾ ಸ್ಮೈಲೇಸ್: Vinay Shirol

Alastair Paterson



ತಯಾರಕರು: Bible for Children
www.M1914.org



©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೇಸು ಅನೇಕ ಅದ್ಭುತಕಾರ್ಯಗಳನ್ನು ಮಾಡಿದನು. ಈ ಅದ್ಭುತಕಾರ್ಯಗಳಿಂದ ಯೇಸು ಕ್ರಿಸ್ತನು ನೀಜವಾದ ದೇವರ ಮಗನು ಎಂದು ಹೇಳಲು ಚಿನ್ಹೆಯಾಗಿದ್ದವು. ಮೊದಲನೆಯ ಅದ್ಭುತವು ಒಂದು ಮಧುವೆಯ ಕಾರ್ಯದಲ್ಲಿ ನಡೆಯಿತು. ಅಲ್ಲಿ ಒಂದು ಸಮಸ್ಯೆ ಎದುರಾಯಿತು ಅದೇನೆಂದರೆ ಎಲ್ಲರಿಗೂ ದ್ರಾಕ್ಷಾರಸ ಸಾಲದೇ ಹೋಯಿತು.



ಯೇಸುವಿನ ತಾಯಿಯಾದ ಮರಿಯಳು ಸಮಸ್ಯೆಯನ್ನು ಯೇಸುವಿಗೆ ವಿವರಿಸಲಾಗಿ, ಅಲ್ಲಿದ್ದ ಸೇವಕರಿಗೆ ಆತನು ಏನು ಹೇಳುತ್ತಾನೋ ಹಾಗೆ ಮಾಡಿರಿ ಎಂದಳು.



"ಈ ಮಡಿಕೆಗಳನ್ನು (ಬಾನೆ) ನೀರಿನಿಂದ ತುಂಬಿರಿ,
ಎಂದು ಯೇಸು ಹೇಳಿದಾಗ ನೀರಾ?" ಎಂದು
ಅಲ್ಲಿದ್ದವರು ಕೇಳಿರಬಹುದು. ಹೌದು, ಯೇಸು
ನೀರನ್ನು ತುಂಬಿಸಲು ಹೇಳಿದನು.



ಆಗ ಅಲ್ಲಿದ್ದ ಒಬ್ಬ ಸೇವಕನಿಗೆ
ಒಂದು ದೊಡ್ಡ ಮಡಿಯಲ್ಲಿ
ತೆಗೆದುಕೊಂಡು ಔತನದ
ಪಾರೂತತ್ಯನಿಗೆ ರುಚಿ ನೋಡಲು
ಹೇಳಿದನು ನೀರು ದ್ರಾಕ್ಷಾರಸವಾಗಿ
ಮಾರ್ಪಟ್ಟಿತ್ತು. ಒಳ್ಳೆಯ
ದ್ರಾಕ್ಷಾರಸವಾಗಿತ್ತು.



ಯೇಸು ನೀರನ್ನು ದ್ರಾಕ್ಷಾರಸವನ್ನಾಗಿ
ಮಾಡಿದನು, ಅಲ್ಲಿದ್ದ ಸೇವಕರು ಇದನ್ನು
ನೋಡಿ ಆಶ್ಚರ್ಯಪಟ್ಟರು. ಅಂತಹ
ಅದ್ಭುತ ಕಾರ್ಯವನ್ನು ಮಾಡಲು
ದೇವರಿಂದ ಮಾತ್ರ ಸಾಧ್ಯ.





ಯೇಸು ಇನ್ನೂ ಬೇರೆ ಅದ್ಭುತ
ಕಾರ್ಯಗಳನ್ನು ಮಾಡಿದನು.
ಒಂದು ಸಂಜೆ ಯೇಸು ಮತ್ತು
ಆತನ ಶಿಷ್ಯರು ಪೇತ್ರನ
ಮನೆಗೆ ಹೋದರು, ಪೇತ್ರನ
ಅಜ್ಜಿಯೂ ಜ್ವರದಿಂದ
ಬಳಲುತ್ತಿದ್ದಳು.

ಯೇಸು ಆಕೆಯ ಕೈಯನ್ನು ಮುಟ್ಟಲು ಅವಳು ಜ್ವರದಿಂದ ತಕ್ಷಣದಲ್ಲಿಯೆ ವಾಸಿಯಾದಳು. ಅವಳು ಎದ್ದು ಬಂದು ಯೇಸು ಮತ್ತು ಆತನ ಶಿಷ್ಯರಿಗೆ ಉಪಚಾರ ಮಾಡಿದಳು.



ಒಂದು ಸಂಜೆ ಪಟ್ಟಣದ
ಎಲ್ಲಾ ಜನರು ತಾನು
ತಂಗಿದ್ದ ಒಂದು ಮನೆಯ
ಬಾಗಿಲಿನ ಮುಂದೆ
ನೆರೆದಿದ್ದರು. ಅಲ್ಲಿ ಕುರುಡರು,
ಕುಂಟರು, ಕಿವುಡರು
ಮೂಕರು, ಅಷ್ಟೆ ಅಲ್ಲದೆ
ದೆವ್ವ ಹಿಡಿದವರು ಸಹ
ಯೇಸುವನ್ನು ನೋಡಲು
ಬಂದಿದ್ದರು. ಆತನು
ಅವರೆಲ್ಲರಿಗೂ ಸಹಾಯ
ಮಾಡಿರಬಹುದಾ?



ದೇವರ ಮಗನಾದ ಯೇಸು ಅವರೆಲ್ಲರಿಗೂ ಸಹಾಯಮಾಡಬಹುದು. ಯೇಸು ಎಲ್ಲರಿಗೂ ಸಹಾಯ ಮಾಡಿದನು, ಬಂದಂತ ಎಲ್ಲರೂ ತಮ್ಮ ತೊಂದರೆನಳಿಂದ ಗುಣವಾದರು, ಯೇಸುವನ್ನು ನೋಡಲು ತೆವಳಿಕೊಂಡು ನಡೆಯಲಾಗದೆ ಬಂದಂತವರು, ಈಗ ನಡೆದು ಓಡಾಡುವಂತಾದರು.





ಇನ್ನೂ ಕೇಲವರು
ಅಂದರೆ ಕುಷ್ಟ
ರೋಗ ಹಿಡಿದವರು
ಸಹ ಬಂದರು.



ಅವರು
ಪರಿಪೂರ್ಣವಾಗಿ
ಕುಷ್ಟ ರೋಗದಿಂದ
ಗುಣವಾದರು.

ದೆವ್ವ ಹಿಡಿದಿದ್ದ ಗಂಡಸರು ಹೆಂಗಸರು ಯೇಸುವಿನ ಮುಂದೆ
ನಿಂತರು, ಆತನು
ದೆವ್ವಗಳಿಗೆ ಅವರನ್ನು
ಬಿಟ್ಟು ಹೋಗಲು
ಆಜ್ಞಾಪಿಸಿದನು.
ದೆವ್ವಗಳು ಯೇಸುವಿಗೆ
ವಿಧೇಯವಾಗಿ
ನಡಗುತ್ತಿದ್ದವು,
ಸಂತೋಷ
ಕಳೆದುಕೊಂಡ ಜನರು
ಸಂತೋಷ ಹಾಗೂ
ಸಮಾಧಾನ
ಹೊಂದಿದರು.



ಜನರ ಗುಂಪಿನ ಹಿಂದೆ ನಾಲ್ಕು ಜನರು ತಮ್ಮ ಸ್ನೇಹಿತನ್ನು ಯೇಸುವಿನ ಬಳಿಗೆ ತರಲು ಪ್ರಯತ್ನಿಸಿದರು. ಆದರೂ ಆಗಲಿಲ್ಲ ಆಗ ಅವರು ಏನು ಮಾಡಿದರೂ ಗೊತ್ತೆ?





ಅನಾರೋಗ್ಯದಿಂದಿದ್ದ ವ್ಯಕ್ತಿಯನ್ನು ಆ ನಾಲ್ಕು
ಜನ ಸ್ನೇಹಿತರು ಮನೆಯ ಮೇಲಿನ
ಚಾವಣಿಯನ್ನು ತೆಗೆದು ವ್ಯಕ್ತಿಯನ್ನು
ಕೆಳಕ್ಕೆ ಬಿಟ್ಟರು ಈಗ
ಅವನು ಯೇಸುವಿಗೆ
ಹತ್ತಿರವಾದನು.

ಯೇಸು ಆ ನಾಲ್ಕು ಜನರ ನಂಬಿಕೆಯನ್ನು ಮೆಚ್ಚಿದನು. ಆಗ ಯೇಸು ಆ ಅನಾರೋಗ್ಯದ ವ್ಯಕ್ತಿಗೆ "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ನಿನ್ನ ಹಾಸಿಗೆಯನ್ನು ತೆಗೆದುಕೊಂಡು ಎದ್ದು ನಡೆ" ಎಂದು ಹೇಳಲು, ಆ ವ್ಯಕ್ತಿಯು ಗಟ್ಟಿಯಾಗಿ ಎದ್ದು ನಿಂತನು. ಯೇಸು ಅವನನ್ನು ಗುಣಪಡಿಸಿದನು.



ಅದಾದನಂತರ ಯೇಸು ಶಿಷ್ಯರೊಂದಿಗೆ ದೋಣಿಯಲ್ಲಿ ಪ್ರಯಾಣಿಸುತ್ತಿದ್ದನು.
ಆಗ ಎತ್ತರವಾದ ದೊಡ್ಡ ಭಯಂಕರವಾದ
ಸಮುದ್ರದ ಅಲೆಗಳು ಅಪ್ಪಳಿಸಿದವು. ಯೇಸು
ಗಾಡ ನಿದ್ರೇಯಲ್ಲಿದ್ದನು ಭಯದಿಂದ
ಕೂಡಿದ ಶಿಷ್ಯರು ಯೇಸುವಿಗೆ
"ಕರ್ತನೆ, ನಮ್ಮನ್ನು ರಕ್ಷಿಸು
ಇಲ್ಲವಾದರೆ ಸಾಯುತ್ತೇವೆ"
ಎಂದು ಕೂಗಿಕೊಂಡರು.



"ಶಾಂತವಾಗು" ಎಂದು ಯೇಸು ಸಮುದ್ರದ ಅಲೆಗಳಿಗೆ ಆಜ್ಞಾಪಿಸಿದನು,
"ಈ ಮನುಷ್ಯನು ಯಾರು?" ಗಾಳಿಯೂ ಮತ್ತು ಸಮುದ್ರವೂ ಸಹ ಈತನಿಗೆ
ವಿಧೇಯವಾಗುತ್ತವಲ್ಲಾ ಎಂದು ತಮ್ಮ ತಮ್ಮಲ್ಲಿಯೆ ಮಾತಾಡಿಕೊಂಡರು.
ಅವರು ಯೇಸು ದೇವರ ಮಗನೆಂದು ತಿಳಿದುಕೊಂಡರು
ಏಕೆಂದರೆ ಆತನು ಅನೇಕ ಅದ್ಭುತ
ಕಾರ್ಯಗಳ ಮೂಲಕ ತನ್ನ
ಮಹಿಮೆಯನ್ನು ತೋರಿಸಿದನು,



ಶಿಷ್ಯರಿಗೆ ಇದು ಅರ್ಥವಾಗಲಿಲ್ಲ
ಆದರೆ ಯೇಸು ಇನ್ನೂ ಅನೇಕ
ದೊಡ್ಡ ಅದ್ಭುತಗಳನ್ನು ಜನರ
ಮಧ್ಯದಲ್ಲಿ ತೋರ್ಪಡಿಸಿದನು.

ಯೇಸು ಮಾಡಿದ ಅದ್ಭುತ ಕಾರ್ಯಗಳು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಮತ್ತಾಯ 8–9, ಮಾರ್ಕ 1–2, ಮಾರ್ಕ 4, ಲೂಕ 4, ಲೂಕ 8, ಯೋಹಾನ 2

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16